ಸೌಭಾಗ್ಯಸೋಪಾನ

ಬೈಂದೂರು ಆನಂದರಾವ್.

ಸೌಭಾಗ್ಯಸೋಪಾನ.

ಚಿತ್ರಶಿಖಂಡಿ, ನೂರಜಹಾನ, ಸಹಕಾರ, ಪುತ್ತೂರು, ಗೃಹಶೀಲೆ,
ರಾಜರ್ಷಿ ಶಿವಾಜಿ, ದೃಶ್ಯಕಾವ್ಯವಿಚಾರ ಇತ್ಯಾದಿ ಗ್ರಂಥಪ್ರಣೀತರಾದ

ಬೈಂದೂರು ಆನಂದರಾವ್

ಇವರ ರಚನೆ.

1936.

ಕೆನರಾ ಛಾಪಖಾನೆ, ಮಂಗಳೂರು.

ಬೆಲೆ: 0-2-0

To

MY DAUGHTERS

LALITHA, PARVATHI, & VARADA.

ಸೌಭಾಗ್ಯಸೋಪಾನ.

೧. ಪ್ರಸ್ತಾವನೆ.

ಶಂಕರನ ಅಂಕದಲಿ ಪೂರ್ಣಗೌರವದಿ
ಕುಳಿತ ಪಾರ್ವತಿಯಂತೆ ಲಗ್ನಕಾಲದಲಿ
ವರನೊಂದಿಗೆಸೆವ ವಧುವಿಗೆ ತಂದೆ ಇತ್ತ
ಆಶೀರ್ವಚನ ಸಾಂಬಶಿವನ ದಯದಿಂದ. ॥ ೧ ॥

ಸುಕುಲಜಂ ಸದ್ಗುಣಾಲಂಕೃತಂ ಸೌಮ್ಯಂ
ಸತ್ಕಲಾಕೋವಿದಂ ವ್ಯಾಯಾಮಶೀಲಂ
ನವಯೌವನಾನ್ವಿತಂ ಖ್ಯಾತನೀತಂಗೆ
ನಿನ್ನನಿತ್ತಿಹೆನು ಪಾವಕಸಾಕ್ಷಿಯಾಗಿ. ॥ ೨ ॥

ತಾಯ್ತಂದೆಗಳ ರಕ್ಷೆಯಲ್ಲಿ ವಿಧಿ ಇಟ್ಟ
ಪರರ ಸಿರಿಯಾಗಿಹುದು ಹೆಣ್ಣುಮಗು ನಿಜವು.
ನಿನ್ನನಾನಿಂದು ಸುಖದಿಂದ ಪತಿಗಿತ್ತು
ಮನಕೆ ಶಾಂತಿಯ ತಾಳ್ದೆ; ಕೃತಕೃತ್ಯನಾದೆ. ॥ ೩ ॥

೨. ಸತಿಧರ್ಮ.

ಸತಿಧರ್ಮವನು ಕೇಳು ಕಿವಿಗೊಟ್ಟು, ಹಸುಳೆ!
ಅನುರಾಗ ಉಪಚಾರ ಬೋಧನಗಳಿಂದ
ಪತಿಯ ಶಾರೀರ ಧಾರ್ಮಿಕ ವಿಚಾರಗಳ
ಮಾನಸಿಕ ವೃತ್ತಿಗಳ ಸುಸ್ಥಿತಿಯೊಳಿರಿಸು. ॥ ೪ ॥

ಮುಖದ ಶಿಖಿಯಲಿ ದುಮುಕಿ, ಶೈಲೇಶನಲ್ಲಿ
ಪುನರವತರಿಸಿ, ಪತಿಯು ಜಾನಿಸುತ ಘೋರ
ಜಪತಪಗಳಿಂದ ನಿಜರಮಣನನ್ನೊಲಿಸಿ,
ಶೂಲಿಯನು ಕೂಡಿದಾ ಜಗದಂಬೆಯಂತೆ ॥ ೫ ॥

ಪಂಕಜಾಸನತನುಜೆಯಲಿ ವೈರ ತಳೆದ
ನಿತ್ಯಚಂಚಲೆಯೆಂಬ ಅಪವಾದವನ್ನು
ಲಕ್ಷಿಸದೆ ನಗುನಗುತ ಪತಿಯು ಪದತಲದಿ
ದುಗ್ಧಾಬ್ಧಿಯಲ್ಲಿರುವ ವರಲಕ್ಷ್ಮಿಯಂತೆ ॥ ೬ ॥

ತನ್ನ ಕರತಲವನಾಶಿಸುತಲೈತಂದ
ಅಷ್ಟದಿಕ್ಪಾಲಕರ ಬಿಟ್ಟು, ಗುಪಿತದಲಿ
ಬಂದ ನಳರಾಯನಂ ಸ್ವೀಕರಿಸಿ, ಪತಿಯು
ಸುಖದುಃಖದಲಿ ಬೆರೆತ ದಮಯಂತಿಯಂತೆ ॥ ೭ ॥

ವರಮಾಲೆಯನು ಹಿಡಿದು ವನದಲ್ಲಿ ಚರಿಸಿ,
ನಿಜಪದಚ್ಯುತ ಕುರುಡ ರಾಯನ ಸುಪುತ್ರ
ಸತ್ಯವಂತನ ಸೇರಿ, ಯಮನ ಮನವೊಲಿಸಿ,
ಪತಿಯ ಮರುಬದುಕಿಸಿದ ಸಾವಿತ್ರಿಯಂತೆ ॥ ೮ ॥

ಕೌಶಿಕನ ಪಂತದಲಿ ಕಾಂತನೊಡಗೂಡಿ
ಮುದ್ದು ಕಂದನ ಸಹಿತ ರಾಜ್ಯವನು ತೊರೆದು
ಸತ್ಯವನು ಪಾಲಿಸಲು ಕಾಡಿನಲಿ ನೊಂದ
ನುತ ಹರಿಶ್ಚಂದ್ರನಾ ಸತಿ ತಾರೆಯಂತೆ ॥ ೯ ॥

ನಿಜಪಿತನು ಚೈದ್ಯ ಶಿಶುಪಾಲನಿಗೆ ಕೊಟ್ಟ
ಮಾತನ್ನು ಧಿಕ್ಕರಿಸಿ, ಹರಿಯ ಮನವೊಲಿಸಿ,
ಚೌರ್ಯದಿಂ ನವನೀತಚೋರನಂ ವರಿಸಿ,
ಯದುಕುಲದಿ ಮೆರೆದ ರುಕ್ಮಿಣಿದೇವಿಯಂತೆ ॥ ೧೦ ॥

ತನ್ನ ನೇತೃತ್ವದಲಿ ಪತಿ ಯತಿಗಳೊಳಗೆ
ವಾಗ್ವಾದವಾಗಿ, ಪತಿ ಸೋಲೆ, ಕಂಗೆಡದೆ
ಯತಿಯೊಡನೆ ತಾ ವಾದ ಮಾಡಿ, ಮುನಿವರನ
ಚಕಿತಗೊಳಿಸಿದ ಭಾರತೀದೇವಿಯಂತೆ ॥ ೧೧ ॥

ಇನಿಯನಾ ಗುಣಗಳಿಗೆ ಮನಸೋತು, ಪಿತನ
ಆಜ್ಞೆಯನು ಲಕ್ಷಿಸದೆ ಆ ಸ್ವಯಂವರದ
ಸಭೆಯೊಳಾ ಸ್ವರ್ಣಮೂರ್ತಿಗೆ ಮಾಲೆಹಾಕಿ
ಪೃಥ್ವಿರಾಯನನಾಯ್ದ ಸಂಯುಕ್ತೆಯಂತೆ ॥ ೧೨ ॥

ತನ್ನ ಪಾತಿವ್ರತ್ಯಮಣಿಗಳುಪಿ ಬಂದ
ಕಾಮಿ ಖಿಲ್ಜಿಗೆ ಕನ್ನಡಿಯ ತಂತ್ರವೆಸಗಿ
ಮಾನವನು ರಾಜ್ಯವನು ರಕ್ಷಿಸಿದ ಧೀರೆ
ಭೀಮಸಿಂಹನ ಪತ್ನಿ ಪದ್ಮಿನಿಯ ತೆರದಿ ॥ ೧೩ ॥

ಅಕ್ಬರನ ಸಭೆಗೆ ವೇಷದಿನೈದಿ, ತನ್ನ
ಅನಘತೆಯ ಸಾಧಿಸುತ ನಿಜಕಾಂತನನ್ನು
ಸಲಹಿ, ಸಮ್ರಾಜನನ್ನಾಶೀರ್ವದಿಸಿದ
ಚಾಂಪರಾಜನ ಧರ್ಮಸತಿ ಸೋನೆಯಂತೆ ॥ ೧೪ ॥

ಅಲ್ಲಲ್ಲಿ ಬೋಧವಾಣಿಯನಿತ್ತು ಪತಿಯ
ಕರ್ತವ್ಯದಲ್ಲಿರಿಸಿ, ಪೂಜ್ಯ ಮಾವನನು
ವೈರಿಗಳ ಸೆರೆಯಿಂದ ಬಿಡಿಸಿದಾ ವೀರೆ
ಶಿವರಾಜನಾ ಪತ್ನಿ ಸಯಿಬಾಯಿಯಂತೆ ॥ ೧೫ ॥

ನೀನೈಕ್ಯಭಾವದಿಂ ಪತಿಯೊಳೊಂದಾಗಿ
ಮನದೊಳು ಮನವು, ನೆನಹಿನೊಳು ನೆನಹು, ಮತ್ತೆ
ವಚನದೊಳು ವಚನ, ತನುವಿನೊಳು ತನು ಬೆರಸಿ,
ಧರಿಸು ನಲ್ಲನ ಸೂಕ್ಷ್ಮಮೂರ್ತಿಯನೆದೆಯಲಿ. ॥ ೧೬ ॥

ಆರೈದು ರಮಣನಾ ಸಿರಿ ಸಕುತಿಗಳನು,
ಸಾಗದಾಗದ ಮೋದಗಳನಪೇಕ್ಷಿಸದೆ,
ಬಾರದ ಪದಾರ್ಥಗಳ ಬಯಸಿ ಬಾಧಿಸದೆ,
ಕೈಸಾರಿದುದಕೆ ಸಂತಸದಿಂದಿರುವುದು. ॥ ೧೭ ॥

ಮುಂಜಾನೆ ಎದ್ದು, ನಿತ್ಯದ ನಿಯಮ ಮುಗಿಸಿ,
ಭೂಪಾಳಿಯನು ಹಾಡಿ, ಚಕ್ರಿಯಂ ಸ್ಮರಿಸಿ,
ಕುಂಕುಮದ ಬೊಟ್ಟಿಟ್ಟು ಗೋವುಗಳಿಗೆರಗಿ,
ತುಲಸಿಯನು ರಂಗವಲಿಯಿಂದಲಂಕರಿಸಿ ॥ ೧೮ ॥

ಅತ್ತೆ ಮಾವಂದಿರನು ಮುದದಿ ಸೇವಿಸುತ,
ಪತಿಯನಾದರಿಸಿ, ಬಾಲಕರ ಲಾಲಿಸುತ,
ಚಿಕ್ಕ ನಾದಿನಿ ಮೈದುನರನು ಪಾಲಿಸುತ,
ಅತಿಥಿಗಳನಭಿಮಾನದಿಂದುಪಚರಿಸುತ ॥ ೧೯ ॥

ಭೇದ ಕಲಹಗಳಿಗೆಡೆಗೊಡದೆ ಮನೆಯೊಳಗೆ,
ಒಕ್ಕಟ್ಟಿನಿಂದಿದ್ದು ನೆರೆಯ ಜನರೊಳಗೆ,
ಮನೆತನವ ಮಾಡುತಲಿ ಶೋಭಿಸೆಲೆ ಅಣುಗೆ
ಸತಿ ಅರುಂಧತಿಯಂತೆ ಪತಿಸದನದೊಳಗೆ. ॥ ೨೦ ॥

ಪಾಕವಿಜ್ಞಾನವೇ ಸತಿಗೆ ಭೂಷಣವು;
ಅಡಿಗೆಯಲಿ ನಿನ್ನತ್ತೆಯೊಡನೆ ಸರಿಗಲೆತು,
ವಿಧವಿಧದ ಶಾಕಪಾಕಗಳನ್ನು ಕಲಿತು,
ನೈಪುಣ್ಯವನು ಪಡೆಯು ಪಾಕಶಾಸ್ತ್ರದಲಿ. ॥ ೨೧ ॥

ಕೈಲಾದ ಕೈಗಾರಿಕೆಗಳನ್ನು ಕಲಿತು,
ಹಸನಾದ ಹೊಲಿಗೆ ಹೆಣಿಗೆಗಳನ್ನು ಮಾಡಿ,
ಕೈರಾಟೆಯಲಿ ನೂತು, ಚಿತ್ರಗಳ ಬರೆದು,
ಸ್ವಾವಲಂಬನವ ಕಲಿ ವಿವಿಧ ರೀತಿಯಲಿ. ॥ ೨೨ ॥

ಶ್ರದ್ಧೆಯಿಂ ಕಲಿಯುದು ನೀ ಶಾರೀರ ಸೂತ್ರ,
ರೋಗಿಗಳ ಶುಶ್ರೂಷೆ, ಮಕ್ಕಳಾರೈಕೆ,
ಆರೋಗ್ಯವಿಜ್ಞಾನ, ಮುಂತಾದ ವಿವಿಧ
ಮನೆವಾರ್ತೆಗಾವಶ್ಯಕತೆಯ ಸಾಧನವ. ॥ ೨೩ ॥

---

೩. ಗಾನ.

ಶಿವನ ಕಂಠದಿನೊಗೆದು ಧರೆಗಿಳಿದು ಜಗವ
ಮೋಹಗೊಳಿಸಿತು ಗಾನವದು ನಿಜವು ನಿಜವು!
ಸಾಮಗಾನವನು ಸುಸ್ವರದಿ ಹಾಡುತಲೆ
ಪೂರ್ವಜರು ದೇವರನ್ನೊಲಿಸಿದರು ಹಿಂದೆ. ॥ ೨೪ ॥

ಮುರಲಿನಾದಕ್ಕೆ ಮನಸೋತು ಗೋಪಿಯರು
ನಂದಕುವರನ ಸುತ್ತ ರಾಸವಾಡಿದರು.
ನಾಗಸರ ಊದಿದರೆ ನಾಗ ನಲಿಯುವನು
ಆಡಿಸುತ ಹೆಡೆಯನ್ನು ಅತ್ತಿತ್ತ ಮುದದಿ. ॥ ೨೫ ॥

ಘೋರಿ ಭಾರತಕೆ ದಂಡೆತ್ತಿ ಬರಲಾಗಿ,
ನಲ್ಲೆಯೊಲುಮೆಯಲಿ ತಲ್ಲೀನನಾಗಿದ್ದ
ಪೃಥ್ವಿಯನು ಕರ್ತವ್ಯಕೆಳೆದು ಸಲಹಿದನು
ಚಾಂದವರ್ಧನು ಸಮರಗೀತವನು ಹಾಡಿ. ॥ ೨೬ ॥

ಔರಂಗಜೇಬನಾ ಸಮ್ಮುಖದಿ ನಿಂತು
ಭೂಷಣನು ಶಿವಛತ್ರಪತಿಯ ಕಥೆ ಹಾಡಿ
ವೀರರಸವನು ಸೂಸಿ ಅರಸನನ್ನೊಲಿಸಿ
ತಾನೊಡ್ಡಿದಾ ಪಂಥದಲಿ ಗೆದ್ದನಂದು. ॥ ೨೭ ॥

ಇಂತಿರುವ ಲಲಿತ ಕಲೆಯಲ್ಲಿ ನಿಪುಣತೆಯ
ಪಡೆದು, ಸುಮಧುರ ಗಾನವಾದನಗಳಿಂದ
ವಲ್ಲಭನ ಹೃದಯದಾನಂದಕೌಮುದಿಯ
ಬೆಳಗಿಸೆಲೆ ವಿವಿಧ ರಸಗಳನು ಸವಿಸುತ್ತ. ॥ ೨೮ ॥

---

೪. ಭಗವತಿಯು ಸೇವೆ.

ಅಂಗಳದಿ ಸದ್ವಿಮಲ ತುಲಸಿಯನು ನೆಟ್ಟು,
ಪುಷ್ಪವನ ಶಾಕವಾಟಿಕೆಗಳನು ಬೆಳೆಸಿ,
ನೀರೆರೆದು ಸಂಜೆಯಲಿ ಕಣ್ಣುಸುತೆಯಂತೆ,
ಆರೋಗ್ಯವನು ಬೆಳೆಸು ಧೀಶಕ್ತಿಯೊಡನೆ. ॥ ೨೯ ॥

ಪುಷ್ಪಸಂಭವಕಾಲದಲ್ಲಿ ಮಲ್ಲಿಕೆಯ
ಕಣಗಿಲೆಯ ಮಾಧವಿಯ ಲತೆಗಳಲಿ ಸರಿದು,
ಸಂಪಗೆಯ ಕೇದಗೆಯ ಬನಗಳಲಿ ನುಗ್ಗಿ,
ಹೂಗೊಯ್ದು ಸೂಸುತ್ತ ಬೀಸುತ್ತ ಸುರಿದು, ॥ ೩೦ ॥

ಸೊಂಪಿಡಿದ ಕಂಪಿಡಿದ ಸುಮಸರವ ಸವೆದು,
ಭಕ್ತಿಯಿಂ ತೋಷದಿಂ ಪ್ರೀತಿಯಿಂ ಮಾತೆ
ಭಗವತಿಗೆ ಕೈಮುಗಿದು, ಮಾಲೆಯನು ಹಿಡಿದು
ಅಂಬೆಯಾ ಪದತಲಕೆ ಬಾಗುತ್ತ ನೀಡಿ, ॥ ೩೧ ॥

ಮೈಯೊಡ್ಡಿ ಕೈಯೊಡ್ಡಿ ಸೆರಗೊಡ್ಡಿ ಬೇಡು
ಸದ್ವರವ ಜಗದಂಬೆ ಮಾದೇವಿಯೊಡನೆ.
ನಿಶ್ಚಯದಿ ಹರಸುವಳು ಮಾಮಾಯೆ ಸದಯೆ
ಭಾರತಿಯ ಸೇವೆ ಪತಿಸುಖವ ನಿನಗಿತ್ತು. ॥ ೩೨ ॥

---

೫. ಶೃಂಗಾರ.

ದಾಳಿಂಬ ಜಂಬೀರ ಚೂತವನಗಳಲಿ
ನಲ್ಲನೊಡನಾಡುತ್ತ ಫಲಿತ ಮಾಮರದ
ಕೆಳಗೊಂಬನೇರಿ ನೇತಾಡಿ ಜೋಲಾಡಿ
ಮೈಚಾಚಿ ಕೈನೀಡಿ ಪಣ್ಗಾಯ ಕಿತ್ತು, ॥ ೩೨ ॥

ಕೆಂದಳಿರು ನವಕುಸುಮಗಳನು ಕೊಯ್ಕೊಯ್ದು,
ಮಡಿಲಲ್ಲಿ ಕೆಂದಳಿರನಂದದಿಂ ಹೊಯ್ದು,
ಮುಡಿಯಲ್ಲಿ ತಳತಳಿಪ ಕುಸುಮಗಳನ್ನಿಟ್ಟು,
ತನಿವಣ್ಣನಿನಿಯನಿಗೆ ಸೊಬಗಿನಿಂದಿತ್ತು, ॥ ೩೪ ॥

ನಗುನಗುತ ಕಾಯುವಾ ರಮಣನನು ಕೂಡಿ
ಕಿಲಕಿಲ ಧ್ವನಿಯಿಂದ ಮನೆಯೊಳಗೆ ಬಂದು,
ಚಿತ್ರದುಡುಗೆಯನುಟ್ಟು, ಭೂಷಣವ ತೊಟ್ಟು,
ಲೀಲೆಯಿಂದಾಡುತ್ತ ಹಾಡುತ್ತ ನಲಿದು, ॥ ೩೫ ॥

ಚೆಲು ಗುಲಾಬಿಯ ಮುಕುಲ ಕುಂಡಲಗಳಿಂದ
ಹರಿತವಲ್ಲಿಯ ನವ ಸ್ವಸ್ತಿಕಗಳಿಂದ
ಸಲ್ಲಲಿತ ಸಹಕಾರ ಮಂಜರಿಗಳಿಂದ
ನಿಖಿಲ ವಾಸಸ್ಥಾನವನ್ನಲಂಕರಿಸಿ, ॥ ೩೬ ॥

ತೋರದುರುಬಿನ ಬಿಣ್ಪು, ಮುಂಗುರುಳ ನಣ್ಪು,
ಮುಡಿದ ಪೂಗಳ ಕಂಪು, ತಿಲಕದಾ ಕೆಂಪು,
ತೆಳ್ಗದಂಪಿನ ನುಂಪು, ಕಡೆಗಣ್ಣಲಂಪು,
ಮಂಜುಳ ಸ್ವರದಿಂಪು, ತೆಳುಮೈಯ ಸೊಂಪು, ॥ ೩೭ ॥

ಮೇಲಾಗಿ ಸದ್ಗುಣವ್ರಾತದಾ ಪೆಂಪು
ಇವುಗಳಿಂ ಶೋಭಿಸೆಲೆ ಜನಕಸುತೆಯಂತೆ
ಸೌಜನ್ಯ ಸೌಶೀಲ್ಯ ಸೌಮನಸ್ಯಾದಿ
ಗುಣಗಳಾ ಸೌರಭವ ಪಸರಿಸುತ ಸುತ್ತ. ॥ ೩೮ ॥

೬. ವಿದ್ಯೆ ಮತ್ತು ಸದ್ಬುದ್ಧಿ.

ವಿಶ್ವವನು ಗೆಲ್ಲುವಾ ವಿದ್ಯೆಯಿರಬೇಕು;
ವಿಶ್ವವಿದ್ಯಾಲಯದ ಬಿರುದಿನಿಂದೇನು?
ವಿದ್ಯೆಯಿದೆಯೆಂಬುದಕೆ ಸಾಕ್ಷಿಯಲ್ಲವದು;
ವಿದ್ಯೆಯಿದ್ದರೆ ಸಾಕು ಸದ್ಬುದ್ಧಿಯೊಡನೆ. ॥ ೩೯ ॥

ಗುಣ ವಿದ್ಯೆ ಸದ್ಬುದ್ಧಿ ಚತುರತೆಗಳಿಂದ
ಲೋಕೋಪಕಾರವನು ಮಾಡಿ ಜಸವಡೆದ
ವಿವಿಧ ಕುಲವಧುಗಳಿಹರೀ ಪುಣ್ಯ ಜಂಬೂ
ದ್ವೀಪದಲಿ ಸುರಪಾರಿಜಾತಂಗಳಂತೆ. ॥ ೪೦ ॥

ನೋಡೆ ಬಹುದುಃಖದಿಂ ಬೆಂದರೂ ಪಿತನ
ಕೈಕೆಳಗೆ ವಿಧವಿಧದ ಶಾಸ್ತ್ರಗಳ ಕಲಿತು
ಗಣಿತಾದಿ ಸದ್ಗ್ರಂಥಗಳ ಬರೆದ ಸುಜ್ಞೆ
ಭಾಸ್ಕರಾಚಾರ್ಯಸುತೆ ಲೀಲಾವತಿಯನು. ॥ ೪೧ ॥

ತನ್ನ ವಿಮಲತ್ವದಲಿ ಸಂಶಯಂಬಟ್ಟು
ನಿಜಪತಿ ಕೆರಳ್ದರೂ ಸಂತವಿಸಿಕೊಂಡು
ತನು ಮನ ವಚನಗಳಲಿ ಹರಿಯಲ್ಲೊಂದಾದ
ಮೀರೆಯಂತಹ ಧರ್ಮದೇವಿಯರ ನಮಿಸು. ॥ ೪೨ ॥

ಕುದುರೆಯನ್ನೇರಿ ಕೈಯಲಿ ಕತ್ತಿ ಹಿಡಿದು
ಘನಘೋರ ಯುದ್ಧದಲಿ ಶತ್ರುಗಳ ಗೆದ್ದು
ರಾಜ್ಯವನು ರಕ್ಷಿಸಿದ ಯವನ ಸುಲ್ತಾನೆ
ಚಾಂದಬೀಬಿಯ ಕಥೆಯು ಸರಸವಾಗಿಹುದು. ॥ ೪೩ ॥

ರಾಜಕುಲದಲಿ ಜನಿಸಿ, ಹೋಳ್ಕರನ ವರಿಸಿ,
ಪತಿ ಕಾಲವಾಗೆ, ತಾ ರಾಜದಂಡವನು

ಹಿಡಿದು ಧಾರ್ಮಿಕ ವೃತ್ತಿಯಿಂದೆಸೆದ ವಿಮಲ
ರಾಜಯೋಗಿನಿ ಅಹಲ್ಯಾಬಾಯಿ ಮಾನ್ಯೆ! ॥ ೪೪ ॥

ನೋಡೆಲೆ ಮೊಗಲ ಸಿಂಹಪೀಠದಲಿ ಕುಳಿತು,
ಮಂತ್ರಿಸಭೆಯಲಿ ರಾಜನೀತಿಯನು ತೋರಿ,
ಸಮರಸಭೆಯಲಿ ಯುದ್ಧಕೌಶಲದಿ ಮೆರೆದ
ಅಪ್ರತಿಮ ರೂಪವತಿ ನೂರ್ಜಹಾನೆಯನು: ॥ ೪೫ ॥

ನಿರವದ್ಯ ಕಾವ್ಯಮೌಕ್ತಿಕಗಳ ಸುರಿಸಿದ
ವಿನುತ ಜೇಬುನ್ನೀಸೆ, ವಂಗ ಕುಲಬಾಲೆ
ತೋರು, ಕನ್ನಡನಾಡ ಕಬ್ಬಿಗಿತಿಯರಹ
ಕಂತಿ ಹೊನ್ನಮ್ಮಾದಿಗಳ ಬಲ್ಲೆ ನೀನು. ॥ ೪೬ ॥

ವೀರ ಬಾಲನಿಗೆ ವೀರೋಚಿತ ಕಲೆಗಳ
ಕಲಿಸಿ, ಕುವರನ ಮಹಾ ಸಂಕಲ್ಪಗಳಲಿ
ಅನುವಾಗಿ, ಧರ್ಮರಾಜ್ಯವ ನೆಲೆಗೊಳಿಸಿದ
ಚಂಡ ಶಿವಜನನಿ ಜೀಜಾಬಾಯಿ ಧನ್ಯೆ! ॥ ೪೭ ॥

ಭರತಖಂಡವ ತನ್ನ ಜನನಿಯಂತೆಣಿಸಿ,
ಧರ್ಮಜಾಗ್ರತಿಯ ಸುವ್ರತವನಾಚರಿಸಿ,
ದೇಶದುದ್ಧಾರದಲಿ ವಿಧವಿಧದಿ ದುಡಿದ
ಆಂಗ್ಲ ಕುಲವಧು ವಸಂತಿಯ ಸದಾ ಸ್ಮರಿಸು. ॥ ೪೮ ॥

ಇಂಪುಗುವ ಕಾವ್ಯಕಾಹಲದಿ ಭಾರತವ
ನಿದ್ದೆಯಿಂದೆಚ್ಚರಿಸಿ, ದೇಶದೊಲುಮೆಯನು
ನಿಜವಚೋಲಹರಿಯಿಂ ಪಸರಿಸುವ ಲಲಿತ
ಕವಿಯಿತ್ರಿ ವರ ಸರೋಜಿನಿಯುವೋಲಿಹರೆ? ॥ ೪೯ ॥

ಹಿಂದೆ ಕೆಲರನು ಹೆಸರಿಸಿದೆನೀಗ ಕೆಲರ
ಹೊಗಳಿಹೆನು; ಮತ್ತಿಹರು ಗುಪ್ತರೀತಿಯಲಿ

ಕಡಲಡಿಯೊಳಿರುವ ಮುಕ್ತಾಫಲಗಳಂತೆ.
ಅವರೆಲ್ಲರನು ನುತಿಸಲೆಡೆಯಿಲ್ಲ, ತನುಜೆ ! ॥ ೫೦ ॥

ವಿಶ್ವವಿದ್ಯಾಲಯದ ಕಚ್ಚಳಿಗಳಿರದೆ
ವಿಶ್ವವಂ ಗೆದ್ದವರವರು ಬುದ್ಧಿಯಿಂದ ;
ಸಾಹಸದಿ ಜನ್ಮಭೂಮಿಯ ಸೇವೆ ಮಾಡಿ
ಇತಿಹಾಸದಲಿ ವಿಪುಲ ಕೀರ್ತಿ ಪಡೆದವರು. ॥ ೫೧ ॥

ರಾಜ್ಯವನು ಪಾಲಿಸಲು ತುಂಬ ನೊಂದವರು,
ಧರ್ಮವನು ರಕ್ಷಿಸಲು ಬಸವಳಿದರವರು,
ಪತಿಸೇವೆ ಸತಿಧರ್ಮಗಳಲಿ ತತ್ಪರರು,
ಅವರವರ ಪಂತದಲಿ ತೀರ ಬೆಳಗಿಹರು. ॥ ೫೨ ॥

ಉಜ್ಜ್ವಲಿಪ ಮೇಲುಪಂಕ್ತಿಗಳವರು ನಿನಗೆ;
ಅಂಥವರ ರೂಪವನು ಕಣ್ಣ ಮುಂದಿಟ್ಟು,
ಸತ್ಕಾರ್ಯಗಳ ಸದಾ ನೆನಹಿನಲ್ಲಿರಿಸಿ,
ಅನುಸರಿಸವರ ನೀತಿಮಾರ್ಗಗಳನನಿಶಂ. ॥ ೫೩ ॥

೭. ವಿದ್ಯೆಯ ಸದುಪಯೋಗ.

ಕಿರಿದಾದ ವಿದ್ಯೆಯಾಗಲಿ ಮೆರೆವುದದರ
ಜೊತೆಯಲ್ಲಿ ಗುಣಗಳಿದ್ದರೆ ರತ್ನದಂತೆ.
ಒರತೆಯಾ ನೀರಾದರೂ ತಾಂ ಬರವನು
ಹಿಂಗಿಸದೆ ಬಹುಜನರ ದಾಹ ಶಮನಿಸುತ ? ॥ ೫೪ ॥

ಅತಿಕಷ್ಟ ಪಟ್ಟು ಬಹುವೆಚ್ಚವನು ಮಾಡಿ
ಆಹಾರ ನಿದ್ದೆಗಳ ಗಣಿಸದೆ ಗಳಿಸಿದ
ವಿದ್ಯೆಯನು ಸದುಪಯೋಗಿಸಿ ಸಫಲಗೊಳಿಸು
ನೀನೀ ಪ್ರಪಂಚದಲಿ, ಮತ್ಕುವರಿ, ಸತತಂ. ॥ ೫೫ ॥

ಸ್ತ್ರೀವಿದ್ಯೆಗೊಪ್ಪಿದಾ ವಿಷಯಗಳನೆತ್ತಿ
ಗ್ರಂಥಗಳ ಲೇಖಗಳ ಕಾವ್ಯಗಳ ಬರೆದು,
ಅಲ್ಲಲ್ಲಿ ಹೋದಲ್ಲಿ ಭಾಷಣವ ಮಾಡಿ,
ಜ್ಞಾನವಂ ಪಸರಿಸೆಲೆ ಬಾಲಿಕೆಯರಲ್ಲಿ. ॥ ೫೬ ॥

ಮಾನಿಗಳ ದಾನಿಗಳ ಜಾನಿಗಳನೊಲಿಸಿ,
ಜನಬಲವ ಧನಬಲವ ಧೀಬಲವ ಬೆರಸಿ,
ಅಂಗನೆಯರೇಳ್ಗೆಯಲಿ ತನುಮನಗಳಿಂದ
ನಿಷ್ಕಾಮ ಕಾರ್ಯಗಳ ಸಾಹಸದಿ ಮಾಡು. ॥ ೫೭ ॥

ಹೀನರನು ಮೇಲೆತ್ತಿ, ದೀನರನು ಸಲಹಿ,
ದಣಿದರಿಗೆ ಕೈಕೊಟ್ಟು, ಹಸಿದರನ್ನುಣಿಸಿ,
ನೊಂದವರ ಬೆಂದವರನಕ್ಕರಿಸಿ, ನಿನ್ನ
ಭಗಿನಿಯರನುದ್ಧರಿಸು ಹಗಲಿರುಳು ದುಡಿದು. ॥ ೫೮ ॥

ಸ್ವಪರವೆಂದೆಸಗದಿರು ಭೇದವನು! ಮೊದಲ
ಬಸುರಿಯನು ಸಿಂಗರಿಸಿ, ಮಡಿಲ ತುಂಬಿಸುತ,
ಊಟ ಉಡುಗೆರೆಗಳಿಂ ಸಂತಸಂಬಡಿಸಿ,
ಬಾಣತಿಯನಾರೈಸು ಶಿಶುವ ಮುದ್ದಿಸುತ. ॥ ೫೯ ॥

ಮುತ್ತೈದೆಯರ ಹಳದಿಕುಂಕುಮಕೆ ಕರೆದು
ವಿಹಿತೋಪಚಾರದಿಂ ಸತ್ಕರಿಸಿ ಮಣಿದು,
ಹರೆಯದಲಿ ತಿಳಿವಿನಲಿ ಹಿರಿಯರಾದವರ
ಗೌರವಿಸು ಅವರ ಗುಣಗಳ ಕಂಪನಾಂತು. ॥ ೬೦ ॥

---

೮. ಲೋಕಸೇವೆ.

ನಿನ್ನ ಮನೆತನದ ಕೆಲಸಗಳ ಲೋಪಿಸದೆ,
ನ್ಯಾಯಮಾರ್ಗವ ಧರ್ಮನಿಷ್ಠೆಯ ತೊರೆಯದೆ,

ಶಕ್ತಿಗುಂದಲು ಬಿಡದೆ, ಕೈವಿಸಾರಗೊಡದೆ,
ಸರ್ವದಾ ಮಾಡುತಿರು ಲೋಕಸೇವೆಯನು. || ೬೧ ||

ಬೀಸುವೆಲರೊಂದಿಗಲುಗುವ ದೀಪದಂತೆ
ಜನಮತವು ದೃಢವಲ್ಲ, ನಿತ್ಯಚಂಚಲವು.
ದೀಪವದು ಬೆಳಗುವುದು ಮಿನುಗುವುದು ಒಮ್ಮೆ;
ಕಿರ್ರಿದಾಗಿ ಕಂದುವುದು ಕುಂದುವುದು ಕಡೆಗೆ. || ೬೨ ||

ಭಿನ್ನಭಾವಗಳಿಂದ ತುಂಬಿಹುದು ಜಗವು;
ಸಾಹಸಕೆ ಮೆಚ್ಚಿ ಕೊಂಡಾಡುವರು ಕೆಲರು,
ಮೆಚ್ಚಿಯೂ ಮಚ್ಚರದಿ ಬೈಯುವರು ಕೆಲರು,
ವಂದಿಪರು ಕೆಲಕೆಲರು, ನಿಂದಿಪರು ಕೆಲರು. || ೬೩ ||

ಇಂತಿರುವ ಮೆಚ್ಚು ಕಚ್ಚುಗಳ ಗಮನಿಸದೆ,
ಉತ್ಸಾಹಗೆಡದೆ, ಹೆದರದೆ, ಹಿಂಜರಿಯದೆ,
ದೇವರಲಿ ವಿಶ್ವಾಸ ಭಾರಗಳನಿಟ್ಟು,
ಕನಸು ನನಸಿನಲಿ ಜನಹಿತದಿ ಮನವಿಟ್ಟು, || ೬೪ ||

ಅಡ್ಡ ಬಂದಿಹ ಕಡ್ಡಿ ಕಸಗಳನು ಬಿಸುಟು
ಹರಿಯುವಾ ಸುತರಂಗೆ ಸುರಗಂಗೆಯಂತೆ
ತೊಡಕುಗಳ ಗೆದ್ದು ಕೈಕೊಂಡ ಕೆಲಸವನು
ಕೊನೆಗೊಳಿಸು ಯತ್ನಿಸುತ ಹಗಲಿರುಳು ಬಿಡದೆ. || ೬೫ ||

ಜನ್ಮಸಾಫಲ್ಯವನು ಜಗದಿ ಗಣಿಸುವುದು
ಯಶ ಪದವಿ ಸಿರಿ ಸಂಪದಂಗಳಿಂದಲ್ಲ,
ಆಪನ್ನರಾ ಬನ್ನಗಳ ಪರಿಹರಿಸಲು
ಮಾಡಿದಾ ನಿಷ್ಕಾಮ ಕಾರ್ಯಂಗಳಿಂದ. || ೬೬ ||

ಪದವಿಯಲಿ ಬಿರುದಿನಲಿ ಕಣ್ಣಿಟ್ಟು ಕೆಲರು,
ಯಶದಾಶೆಯಿಂ ಕೆಲರು, ವಿಷಯಸುಖ ಬಯಸಿ

ಕೆಲಕೆಲರು, ಕೂಳಿಗೋಸುಗ ಹಲಬರಿಂತು
ಸ್ವಾರ್ಥಿಗಳು ನಲಿಯುವರು ಜನಸೇವೆಯೆಂದು. ॥ ೬೭ ॥

ಹೆಣ್ಣಾದರೇನು ಗಂಡಾದರೇನವರು?
ಅಂಥವರ ನೇಹದೊಡಕಿಗೆ ಸಿಲುಕದಿರೆಲೆ!
ಹಾಲು ಕೊಟ್ಟರೆ ಹಾವು ಕಚ್ಚದು ಮನುಜಗೆ,
ಸ್ವಾರ್ಥಿಗಳು ಕಚ್ಚುವರು ಉಪಕಾರ ಮರೆತು. ॥ ೬೮ ॥

ಹೊಳೆವ ವಸ್ತುಗಳೆಲ್ಲ ಬಂಗಾರವಲ್ಲ;
ಮೈಯ ಸಿಂಗರದಿಂದ ಗುಣಗಣನ ಸಲ್ಲ.
ಹೊರಗೆ ಕೃತ್ರಿಮ ತಳಕು, ಎದೆಯೊಳಗೆ ಕೊಳಕು-
ಇಂಥವರ ಸಂಗವದು ಅಭಿಮಾನ ಭಂಗ. ॥ ೬೯ ॥

ರವಿಯು ಬಿಡುವಿಲ್ಲದಾ ಸಪ್ತಾಶ್ವದಂತೆ
ಶುದ್ಧಮನದಿಂ ಲೋಕಹಿತಕಾಗಿ ದುಡಿವ
ಬಹು ಮಂದಿ ಧರ್ಮಾತ್ಮರಿಹರೀ ಜಗದಲಿ;
ಆದರ್ಶ ಚೂಡಾಮಣಿಗಳಿವರು ನಿನಗೆ. ॥ ೭೦ ॥

---

೯. ಸ್ವದೇಶ, ಸ್ವಧರ್ಮ, ಸ್ವಭಾಷೆ.

ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗದಿರೆಲೆ!
ತನ್ನದಿವು ಜನ್ಮಭುವಿ ಧರ್ಮ ನೀತಿಗಳು,
ತನ್ನ ಸಾಹಿತ್ಯ ವಾಙ್ಮಯ ಭಾಷೆಗಳಿವು,
ಎನ್ನುತಭಿಮಾನದಿಂ ಕಾಂಬವಳೆ ಮಾನ್ಯೆ! ॥ ೭೧ ॥

ವರ ಷಡಕ್ಷರಿ, ಪಂಪ, ಲಕ್ಷ್ಮೀಶ, ರನ್ನ,
ಸರ್ವಜ್ಞ, ಸೋಮೇಶ್ವರ, ಪುರಂದರಾದಿ
ಕವಿವರರು ಸುಸ್ವರದಿ ಹಾಡಿದಾ ಮಧುರ
ಕವಿತೆಗಳ ತನಿರಸವ ಸೇವಿಸೆಲೆ ಸತತಂ. ॥ ೭೨ ॥

ವ್ಯಾಸ, ವಾಲ್ಮೀಕಿ, ಭಾರವಿ, ಮಾಘ, ದಂಡಿ,
ಮನು, ಕಾಳಿದಾಸ, ಭವಭೂತಿ, ಬಾಣಾದಿ
ಆರ್ಯರಾ ಅಮೃತೋಕ್ತಿಗಳ ಕಂಪನಾಂತು
ಸುಜ್ಞತೆಯು ಪಡೆಯು ನೀ ವಿಮಲ ಸಂಸ್ಕೃತದಿ. ॥ ೭೩ ॥

ಪರರ ರೀತಿಗೆ ಹರಿವ ಮನವ ಹಿಂದೆಳೆದು,
ಪೂರ್ವಜರು ವೇದೋಕ್ತವಾಗಿ ಬೋಧಿಸಿದ
ವರ ಸನಾತನಧರ್ಮವೇ ಮಾನ್ಯವೆಂದು
ಧರಿಸು ನೀನದನು ಹೃದಯದಿ ಭಕ್ತಿಯಿಂದ. ॥ ೭೪ ॥

---

೧೦. ಸತ್ಯ.

ನಿಖಿಲ ಸದ್ಗುಣಗಳಲಿ ಸತ್ಯವದು ಮೊದಲು.
ವಿದ್ಯಾಪ್ರಚಾರಕ್ಕೆ ತಥ್ಯವೇ ಪಥ್ಯ.
ಸತ್ಯಾಚರಣೆಯಿಂದಹರ್ನಿಶಂ ಮಿನುಗು
ಆಕಾಶದಲಿ ರವಿ ತೊಳಗಿ ಬೆಳಗುವಂತೆ. ॥ ೭೫ ॥

ಸತ್ಯರಾ ನಡೆ ತೀರ್ಥ, ಸತ್ಯವೇ ತೀರ್ಥ,
ಸತ್ಯರಾ ಸಂಗವದೆ ತೀರ್ಥಸಂಗಮವು,
ಸತ್ಯವೇ ತಾಯ್ತಂದೆ ಬಂಧುಬಳಗವದು,
ಸತ್ಯವಿರೆ ಮೆಚ್ಚುವನು ಸತ್ಯಮೂರುತಿಯು. ॥ ೭೬ ॥

---

೧೧. ಕರುಣ.

ನಯಮಾತು ದಾಕ್ಷಿಣ್ಯ ಭೂತದಯೆಗಳಿವು
ಸತತಮಿರಬೇಕಮ್ಮ! ರಸಗಳಲಿ ಕರುಣ
ಗುಣಗಳಲಿ ಕರುಣವಿವು ಮನವ ಶುಚಿಗೊಳಿಸಿ
ಮನುಜರನು ಸಂಸ್ಕರಿಸುವವು ನಿಜವು ನಿಜವು. ॥ ೭೭ ॥

ವಜ್ರಾಯುಧವು ತಗಲಿ ಕಾರ್ಮುಗಿಲು ಕರಗೆ
ನಭದಿ ಶೀತಲ ಧಾರೆ ಸುರಿಯುವಾ ತೆರದಿ,
ಪರರ ದುಃಖವ ನೋಡಿ ಹೃದಯವದು ಕರಗೆ
ಕರುಣರಸ ಹರಿಯುವುದು ತಾನಾಗಿ ಹೊರಗೆ. ॥ ೭೮ ॥

ಸತ್ಪಾತ್ರನಿಗೆ ಇತ್ತ ದಾನದಂತಿಹುದು;
ಕೊಟ್ಟವನ ಕೊಂಬವನ ಸಮತೆಯಿಂ ಹರಸಿ,
ಇಮ್ಮಡಿಯೆನಿಸಿ ಶುಭವನಿತ್ತು ಮೆರೆಯುವುದು.
ಉತ್ತಮೋತ್ತಮ ಗುಣವು! ಈಶಲಕ್ಷಣವು! ॥ ೭೯ ॥

ಮಾನಿನಿಯ ಸರ್ವಾಂಗ ಭೂಷೆಗಳಿಗಿಂತ
ಉಚ್ಚತರ ಹೃದಯದಾಭರಣವದು ಕರುಣ!
ತಾಲಿ ಕರಿಮಣಿ ತಿಲಕಗಳು ಸುಮಂಗಲಿಯ
ಶೋಭೆಗಳು; ಕರುಣವದು ಪದ್ಮಿನಿಯ ಗುಣವು. ॥ ೮೦ ॥

---

೧೨. ತವರುಮನೆ.

ನೀನೊಗೆದು, ತಾಯುಡಿಯೊಳಾಡಿ ಸೊಗಗೂಡಿ,
ತಂದೆಯಾ ಅಂಕದಲಿ ತೊದಲುತ್ತ ನಲಿದು,
ಒಡಹುಟ್ಟಿದವರೊಡನೆ ನೇಹದಿಂ ಬೆಳೆದ
ತವರನ್ನು ಎಂದಿಗೂ ಮರೆಯದಿರು, ಮಗುವೆ! ॥ ೮೧ ॥

ವಾತ್ಸಲ್ಯದಿಂದ ಹಿರಿಯರನು ಗೌರವಿಸಿ
ಕಿರಿಯರನು ಲಾಲಿಸುತ, ಐಕ್ಯದಿಂದವರ
ಸುಖದಲ್ಲಿ ಬೆರೆತು ದುಃಖದಲಿ ನೆರವಾಗಿ,
ಹೆತ್ತ ಹೊಟ್ಟೆಗೆ ನೀನು ಹರುಷ ತಾರಮ್ಮ! ॥ ೮೨ ॥

---

೧೩. ಮಂಗಲ.

ಆನಂದಮಯಿ ವರದೆ ಶಾರದೆಯು ನಿನ್ನ
ಧೀಜ್ಯೋತಿಯನು ಸದಾಕಾಲ ಬೆಳಗಿಸಲಿ!
ಇಡಲಿ ತವ ತನು ಮನಸು ಧೀಶಕ್ತಿಗಳನು
ಜನ್ಮಭೂಮಿಯ ಸೇವೆಯಲಿ ಮಾಂಗಿರೀಶಂ! ॥ ೮೩ ॥

ನಿತ್ಯಸೌಮಂಗಲ್ಯ ಪುತ್ರೋದಯಗಳ
ಹರಸುವಳು ರಮೆ ನಿನಗೆ; ಸದಯ ಮಾಧವನು
ತವ ಧವನ ಹರಸುವನು ಮಾನ ಮರ್ಯಾದೆ
ಅಭ್ಯುದಯವಿತ್ತು ರಾಜದ್ವಾರದಲ್ಲಿ. ॥ ೮೪ ॥

ಇಂತೆನ್ನ ಆಶೀರ್ವಚನ ಸದುಪದೇಶ
ಮಂತ್ರಾಕ್ಷತೆಗಳನ್ನು ತಲೆಯಲ್ಲಿ ಧರಿಸಿ,
ದೇವರನು ನುತಿಸಿ, ಗುರು ಹಿರಿಯರಿಗೆ ನಮಿಸಿ,
ಪತಿಗೃಹಕೆ ಹೋಗಿ ಸುಖದಿಂದ ಬಾಳಮ್ಮ! ॥ ೮೫ ॥

ಸಂಪೂರ್ಣ

ಹರಪನಹಳ್ಳಿ